Member's Representation.

*Sri A. V. NARASIMHA REDDY (Bangalore-South).—Sir, before we go to the next business, I want to raise a point.

ಸ್ವಾಮಿ, ಈ ಪ್ರಶ್ನೋತ್ತರಗಳ ಸಂಬಂಧದಲ್ಲಿ ಈ ಸಭೆಯಲ್ಲಿ ನಡೆಯುತ್ತಿರುವ ಇನ್ನು ಕೆಲವು ಕಾರ್ಯ ಕಲಾಪಗಳ ಸಂಬಂಧದಲ್ಲಿ ನಮಗೆ ಈಗಿರತಕ್ಕ ಕಷ್ಟ ಗಳನ್ನು ತಮ್ಮ ಗಮನಕ್ಕೆ ತರಲಿಚ್ಚಿಸುತ್ತೇನೆ. ನಮ್ಮ ಅಸೆಂಬ್ಲಿಯ ಕಾರ್ಯಕ್ರಮದ ರೂಲ್ಸುಗಳ–ಪ್ರೊಸೀಜರಿನ Section 168ರಲ್ಲಿ ಈ ರೀತಿಯಿದೆ:

Residuary Powers.

"168 All matters not specifically provided in the rules and all questions relating to the detailed working of these rules shall be regulated in such manner as the Speaker may from time to time direct."

ಈ ಒಂದು ಕ್ರಮವನ್ನನುಸರಿಸಿ ಶಾಸನಸಭಾ ಸದಸ್ಯರು ಮತ್ತು ಅಧ್ಯಕ್ಷರು ಈಗ ನಡೆದುಕೊಂಡುಹೋಗುತ್ತಿದ್ದಾರೆ. ಪ್ರಶ್ನೋತ್ತರಗಳ ಸಂಬಂಧದಲ್ಲಿ ಒಂದಂಶವನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಪೇಜು 11, ಸೆಕ್ಷನ್ 30ರಲ್ಲಿ—

"The reply to any question included in the list of questions for answer on any day and not called for answer within the time available for answer on that day shall be printed in the proceedings for that day, and such question shall not be taken up for reply on any subsequent day"

ಈ ರೀತಿ ಸ್ಪಷ್ಟವಾಗಿ ತಿಳಿಸಿದೆ. ಮಾನ್ಯ ಅಧ್ಯಕ್ಷರಲ್ಲಿ ನನ್ನ ಪ್ರಾರ್ಥನೆ ಏನೆಂದರೆ, ಈ ಒಂದು ಮುಖ್ಯವಾದ ವಿಷಯವನ್ನು ಪ್ರಿವಿಲೇಜಸ್ ಕಮಿಟಿಗೆ ರೆಫರ್ ಮಾಡಿ ಅಲ್ಲಿಂದ ಶಿಫಾರ್ಸಾಗಿ ಬಂದ ನಂತರ ನಮ್ಮ ಹಕ್ಕು ಬಾಧ್ಯತೆಗಳೇನೆಂಬುದನ್ನು ಈ ಮಾನ್ಯ ಸಭೆಯು ನಿರ್ಧರಿಸಬೇಕು. ಅಲ್ಲದೆ ಈಗ ತಾವು ಈ ಕೆಲವು ನಿಯಮಗಳನ್ನು ನಸ್ಪೆಂಡು ಮಾಡುವುದಕ್ಕೆ ಅಧಿಕಾರ ವಿದೆಯೇ? ರೂಲ್ಸ್ ಕಮಿಟಿಯವರಿಗೆ ಇದನ್ನು ವಹಿಸಿ ಅವರಿಂದ ಬಂದ ಶಿಫಾರಸುಗಳ ಮೇಲೆ ಈ ಸಭೆಯಲ್ಲಿ ನಾವು ನಿರ್ಧರಿಸಬೇಕು. ಇದು ತಮ್ಮ Residuary Powers ನಲ್ಲಿ ಸೇರಿಲ್ಲವೆಂದು ತೋರುತ್ತದೆ.

Mr. SPEAKER.—The Hon'ble Member is working on certain assumptions which are not correct. I have the power to suspend the rules under the States Reorganisation Act. That Act gives me the power to suspend any rule I like. It is under that power that I have suspended this rule.

Sri N. RACHIAH (Hunsur–Scheduled Castes).—On a point of order. Is it suspended for ever or for a specified period only?

Mr. SPEAKER.—It is not suspended for ever. The Hon'ble Member has come to the House only recently. Perhaps, he is not aware that we have appointed a Rule—making Committe under Article 208 (2). That Committee has already submitted its report and that report is going to be discussed here. Till then some of the rules have been suspended. The Hon'ble Member Sri Narasimha Reddy perhaps knows that I have suspended this rule.

Sri J. SHAMSUDDIN HUSAIN SAIB (Honawar).—On a point of order, Sir. Can an Hon'ble Member other than a Minister make a statement?

Sri A. V. NARASIMHA REDDY.—I am not making a statement; I am making a representation I have every right to make a representation. There is a well-known convention of this House to that effect.

ಸ್ವಾಮಿ, ರೂಲ್ಸ್ ಆಫ್ ಪ್ರೊಸೀಜರಿನಲ್ಲಿ ಇರುವುದನ್ನು ಎಲ್ಲೆ ಸ್ವಲ್ಪ ಅನುಮಾನವಿದೆಯೋ ಅದನ್ನು ಸಮನ್ವಯ ಮಾಡಿಕೊಂಡು, ಒಂದು conventionನ್ನು ಏರ್ಪಡಿಸಿ ಸಭೆಯನ್ನು ನಡೆಸುತ್ತಿರುವುದನ್ನು, ರೂರ್ಸ್‌ನಲ್ಲಿ ಸ್ಪಷ್ಟವಾಗಿದ್ದರೂ ಅದನ್ನು suspend ಮಾಡಿ ಅಧ್ಯಕ್ಷರು ಕಾರ್ಯಕಲಾಪಗಳನ್ನು ನಡೆಸುವುದರಿಂದ ನಮಗೆ ಉಂಟಾಗಿರುವ ಕಷ್ಟವನ್ನು ನಿವೇದನೆ ಮಾಡಿಕೊಳ್ಳುವುದಕ್ಕೆ ನಿಂತಿದ್ದೇನೆ.

ನಿಬಂಧನೆಗಳ 15ನೆಯ ನಿಯಮದಲ್ಲಿ 15 ದಿವಸಗಳಿಗೆ ಮೊದಲು ಪ್ರಶ್ನೆಗಳನ್ನು ಸದಸ್ಯರುಗಳು ಮಾನ್ಯ ಅಧ್ಯಕ್ಷರಿಗೆ ಕಳುಹಿಸಿಕೊಡಬೇಕೆಂದಿದೆ. ಈ ನಿಯಮ ಸ್ಪಷ್ಟವಾಗಿ ಕೂಡ ಇದೆ. ಈಗ ತಾವು ಕಳಿಸಿರತಕ್ಕ ಸರ್ಕ್ಯುಲರ್ ಪ್ರಕಾರ ಈ ರೀತಿ ಕಾಲದ ಮಿತಿ ಇಲ್ಲ. ಯಾವಾಗ ಬೇಕಾದರೂ ಶಾಸನಸಭಾ ಸದಸ್ಯರು ಎಷ್ಟು ಪ್ರಶ್ನೆಗಳನ್ನು ಬೇಕಾದರೂ ಕಳಿಸಿಕೊಡಬಹುದೆಂದಿದೆ. ಇದರಿಂದಾಗಿ ಕಷ್ಟವೇನೆಂದರೆ, ಒಬ್ಬ ಸದಸ್ಯರು ಲೆಕ್ಕವಿಲ್ಲದಷ್ಟು ಪ್ರಶ್ನೆಗಳನ್ನು ಕಳಿಸಿಕೊಡಬಹುದು. ಉದಾಹರಣೆಗೆ ನಾನೇ 20 ಪ್ರಶ್ನೆಗಳನ್ನು ಕಳುಹಿಸಿದ್ದೇನೆ. ಸರ್ಕಾರದ ನಡೆವಳಿಕೆಯಲ್ಲಿ, ಆಡಳಿತ ಕ್ರಮದಲ್ಲಿ ಇರತಕ್ಕ ನ್ಯೂನಾತಿರೇಕಗಳನ್ನು ತಿಳಿದುಕೊಳ್ಳುವುದು ಮುಖ್ಯವಾದ ಉದ್ದೇಶ. ಆದರೆ, ಪ್ರತಿ ಸದಸ್ಯನೂ unlimited ಪ್ರಶ್ನೆಗಳನ್ನು ಕಳುಹಿಸುವುದಕ್ಕೆ ಅಧಿಕಾರ ಕೊಟ್ಟಿರುವಾಗ, ಎಲ್ಲಾ ಪ್ರಶ್ನೆಗಳಿಗೂ ಪೂರ್ಣ ಉತ್ತರ ಕೊಡಬೇಕಾದರೆ ಈ ಸಭೆಯ ಒಂದು ಸೆಷನ್ನಿನ ಅವಧಿಯಲ್ಲೇ ಆಗುವುದು ಸಾಧ್ಯವಿರುವುದಿಲ್ಲ. ಜೊತೆಗೆ ನಮಗೂ ಇನ್ನೊಂದು ಕಷ್ಟವಿದೆ. ಒಂದು ಸೆಷನ್ ಆದ ಮೇಲೆ ಇನ್ನೊಂದು ಸೆಷನ್ ಬರುವುದಕ್ಕೆ ಮಧ್ಯಕಾಲದಲ್ಲಿ ನಡೆದಿರತಕ್ಕ ಹೊಸ ಸಮಾಚಾರಗಳನ್ನು ತಿಳಿದುಕೊಳ್ಳುವುದಕ್ಕೆ ಪ್ರಶ್ನೆಗಳನ್ನು ಕಳಿಸಿದರೂ, ಹಿಂದೆ ಕಳುಹಿಸಿದ ಪ್ರಶ್ನೆಗಳೇ ಇರುವಾಗ ಈ ಪ್ರಶ್ನೆಗಳಿಗೆ ಸರ್ಕಾರ ಉತ್ತರ ಕೊಡುವುದಕ್ಕೆ ಅವಕಾಶವೇ ಇರುವುದಿಲ್ಲ. ತಾವು ಹೇಳಬಹುದು, ಉತ್ತರಗಳನ್ನು ಸದಸ್ಯರ ಮನೆ

ಗಳಿಗೆ ಕಳಿಸಿಕೊಡಲಾಗುತ್ತದೆ ಎಂದು. ಆ ಉದ್ದೇಶದಿಂದ ನಾವು ಕಳಿಸಿಲ್ಲ. ನಾವು ಪ್ರಶ್ನೆಗಳನ್ನು ಈ ಸಭೆಯಲ್ಲಿ ಕೇಳಬೇಕು; ಕೇಳಿ, ಅನುಮಾನಗಳನ್ನು ವಿಶದೀಕರಿಸಿಕೊಳ್ಳಬೇಕು. ಅಧ್ಯಕ್ಷರು ತಮಗಿರುವ discretionary ಅಧಿಕಾರವನ್ನು ನಮಗೆ ಅನಾನುಕೂಲವಾಗುವ ಹಾಗೆ ಬಳಸಕೂಡದೆಂದು ನಾನು ಕೇಳಿಕೊಳ್ಳುತ್ತೇನೆ. ಈಗಿರುವ ಕಲಮುಗಳಲ್ಲಿ ಸ್ಪಷ್ಟವಾಗಿರುವುದನ್ನು ಅದರಂತೆಯೇ ನಡೆಸಬೇಕೆಂದು ಹೇಳುತ್ತೇನೆ.

ಪ್ರಶ್ನೋತ್ತರಗಳನ್ನು ಸದಸ್ಯರುಗಳು ಈ ಸಭೆಯಲ್ಲಿ ಕೇಳತಕ್ಕ ವಿಚಾರದಲ್ಲಿ ಈಗ ನಡೆಯುತ್ತಿರುವ ಪ್ರಕಾರ ಸದಸ್ಯರು ಪ್ರಶ್ನೆಯನ್ನು ಕೇಳಿದ ಮೇಲೆ, ಉತ್ತರವನ್ನು ಮಂತ್ರಿಗಳು ಕೊಡುವ ಸಂದರ್ಭದಲ್ಲಿ, ಆ ಸದಸ್ಯರು ಕುಳಿತುಕೊಳ್ಳುತ್ತಾರೆ. ಹಾಗೆ ಕುಳಿತುಕೊಂಡ ಮೇಲೆ ಪ್ರಶ್ನೆಯನ್ನು ಕೇಳುವ ಹಕ್ಕನ್ನು ಸದ್ಯಕ್ಕೆ ಕಳೆದುಕೊಂಡಂತಾಗುತ್ತದೆ, ಅಧ್ಯಕ್ಷರು ಬೇರೆಯವರನ್ನು ಕರೆಯಬಹುದೆಂದು ಅಧ್ಯಕ್ಷರು ಒಂದು ರೂಲಿಂಗ್ ಅಪ್ಪಣೆ ಕೊಡಿಸಿದ್ದಾರೆ. ಇದರಿಂದ ಏನು ಕಷ್ಟವೆಂಬುದನ್ನು ಹೇಳುತ್ತೇನೆ. ಸರ್ವೆಸಾಧಾರಣವಾಗಿ ಒಬ್ಬನು ಒಂದು ಪ್ರಶ್ನೆ ಕೇಳುತ್ತಾನೆ, ಮಂತ್ರಿಗಳು ಉತ್ತರ ಕೊಡಲು ಎದ್ದರೆಂದು ಆತ ಕುಳಿತುಕೊಳ್ಳುತ್ತಾನೆ. ಉತ್ತರವಾದ ತಕ್ಷಣ further supplementary ಕೇಳೋಣವೆಂದು ನಿಂತರೆ, ಅಧ್ಯಕ್ಷರು ತಮ್ಮ 'Eye catch' ಮಾಡಲಿಲ್ಲವೆಂದು ಹೇಳಿ ಇನ್ನೊಬ್ಬರಿಗೆ ಪ್ರಶ್ನೆ ಹಾಕಲು ಅವಕಾಶ ಕೊಡುತ್ತಾರೆ. ಹೀಗೆ ಆದರೆ, ಸಭಾಧ್ಯಕ್ಷರ ಗಮನ ಮೊದಲನ ಸದಸ್ಯನಿಂದ ತಪ್ಪಿ ಇನ್ನೊಬ್ಬ ಸದಸ್ಯನ ಕಡೆಗೆ ಹೋಯಿತೆಂದು ಹೇಗೆ ಭಾವಿಸುವುದು? ಜೊತೆಗೆ ಮೊದಲು ಪ್ರಶ್ನೆ ಹಾಕುವವನು ಯಾವ ಉದ್ದೇಶದಿಂದ ಪ್ರಶ್ನೆ ಹಾಕಿದನೋ, ಆ ಉದ್ದೇಶ ಮರೆತುಹೋಗಿ entire trend ತಪ್ಪಿಹೋಗುತ್ತದೆ. ಇನ್ನೊಬ್ಬನಿಗೆ ಮಧ್ಯೆ ಅವಕಾಶ ಕೊಟ್ಟರೂ, ಮತ್ತೆ ಮೊದಲನ ಸದಸ್ಯನು ತಾನು ಮರೆತಿರುವುದನ್ನು ಕೇಳುವುದಕ್ಕೆ ಅವಕಾಶವಿದೆಯೆನ್ನಬಹುದು. ನಿಮ್ಮ ಅಭಿಪ್ರಾಯ ಇದಾಗಿದ್ದರೆ, ಒಬ್ಬ ಒಂದು ಪ್ರಶ್ನೆ ಕೇಳಿದ ಮೇಲೆ ಎರಡನೆಯ ಸಪ್ಲಿಮೆಂಟರಿ ಕೇಳುವುದಕ್ಕೆ ಅವಕಾಶವಿಲ್ಲವೆಂದು ಮಾಡಿಬಿಡಿ. ಇಲ್ಲದಿದ್ದರೆ ಪೂರ್ತಿಯಾಗಿ ಒಬ್ಬ ಸದಸ್ಯನಿಗೆ ಸಂಬಂಧಪಟ್ಟಂತೆ ಇರುವ ಎಲ್ಲ ಸಪ್ಲಿಮೆಂಟರಿ ಪ್ರಶ್ನೆಗಳಿಗೂ ಅವಕಾಶ ಕೊಟ್ಟು, ಅದಾದ ಮೇಲೆ ಇನ್ನೊಬ್ಬರಿಗೆ ಅವಕಾಶ ಕೊಡಬೇಕೆಂದು ಹೇಳುತ್ತೇನೆ. ಈಗಿನ ಪದ್ಧತಿಯಂತೆ ಅನೇಕ ಸದಸ್ಯರಿಗೆ ಪೂರ್ತಿಯಾಗಿ ಉಪಪ್ರಶ್ನೆಗಳನ್ನೆಲ್ಲಾ ಕೇಳುವುದಕ್ಕೇ ಆಗುವುದಿಲ್ಲ. ಅನೇಕ ವೇಳೆ ಮೂಲ ಪ್ರಶ್ನೆಯನ್ನು ಕಳಿಸಿದವರಿಗೆ ಹೆಚ್ಚಿನ ಅವಕಾಶವಾಗುವುದಿಲ್ಲ.

ಅಧ್ಯಕ್ಷರು.—ಇನ್ನು ನಾನು ತವಗೆ ಉತ್ತರ ಕೊಡುತ್ತೇನೆ. ತಾವು ಹೇಳುವುದರಲ್ಲಿ ಇಷ್ಟೆಲ್ಲಾ ವಿವರವಾಗಿ ಹೇಳಬೇಕಾಗಿರಲಿಲ್ಲ. ಸ್ವಲ್ಪದರಲ್ಲೇ ಹೇಳಬಹುದಿತ್ತು.

ಶ್ರೀ ಎ. ವಿ. ನರಸಿಂಹರೆಡ್ಡಿ.—ನನಗೇನು ನ್ಯಾಯವೆಂದು ತೋರುತ್ತದೆಯೋ ಅದನ್ನು ಈ ಸಭೆಗೆ ಎಲ್ಲರಿಗೂ ಅರ್ಥವಾಗುವಂತೆ ಹೇಳಬೇಕೆಂಬುದು ನನ್ನ ಉದ್ದೇಶ.

ಅಧ್ಯಕ್ಷರು.—ನಾನು ತಿಳಿದುಕೊಳ್ಳಬೇಕೆಂದು ತಾವು ಹೇಳುತ್ತಿದ್ದರೆ, ನನಗೆ ಈಗಾಗಲೇ ಅರ್ಥವಾಯಿತು.

ಶ್ರೀ ಎ. ವಿ. ನರಸಿಂಹರೆಡ್ಡಿ.—ನನ್ನ ಕಷ್ಟವನ್ನು ತಮಗೂ ಅರ್ಥವಾಗುವಂತೆ ಹೇಳಬೇಕು. ಸಭೆಯವರಿಗೂ ಅರ್ಥವಾಯಿತೆಂದು ನನ್ನ ಮನಸ್ಸಿಗೆ ಹೊಳೆಯುಬೇಕು. ತಾವು ದಯವಿಟ್ಟು ನನ್ನ ಈ ಕಷ್ಟವನ್ನು ಪರಿಹಾರ ಮಾಡಿಕೊಡಬೇಕು. ಆದ್ದರಿಂದ ತಾವು ದಯವಿಟ್ಟು ಈ ವಿಷಯದಲ್ಲಿ ಏನೇನು ರೂಲಿಂಗ್ಸ್ ಕೊಟ್ಟಿದ್ದೀರೋ ಅದನ್ನೆಲ್ಲಾ ರೂಲ್ಸ್ ಕಮಿಟಿಗೆ refer ಮಾಡಿ ಸೂಕ್ತ ಮಾರ್ಪಾಡನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ಮಾನ್ಯಸದಸ್ಯರು ನಾಲ್ಕಾರು ಅಂಶಗಳನ್ನು ಎತ್ತಿದ್ದಾರೆ. ಮೊದಲನೆಯದಾಗಿ ನಿಬಂಧನೆಗಳಲ್ಲಿನ 30ನೆಯ ಕಲಮಿನಲ್ಲಿ ಹೇಳಿರುವುದನ್ನು ನಡೆಸಿಕೊಂಡು ಹೋಗಬೇಕೆಂದು ಹೇಳಿದ್ದಾರೆ. 30ನೆಯ ನಿಯಮದಲ್ಲಿ ಏನು ಹೇಳಿದೆಯೆಂದರೆ :

> "The reply to any question included in the list of questions for answer on any day and not called for answer within the time available for answer on that day shall be printed in the proceedings for that day, and such question shall not be taken up for reply on any subsequent day :
>
> provided that, if a session of the Assembly is continued beyond the date provisionally fixed at the commencement of the session for its termination the question included in the list of questions for the last day of the session so provisionally fixed and not taken up for answer on that day may be taken up for answer on the subsequent day or days of the session."

ಅಂದರೆ, ಯಾವ ಯಾವ ಪ್ರಶ್ನೆಗಳನ್ನು ಯಾವ ಯಾವ ದಿವಸಕ್ಕೆಂದು ಹಾಕಿರುತ್ತದೆಯೋ, ಅವನ್ನು ಆಯಾ ದಿವಸ ಕರೆಯದೆ ಇದ್ದರೆ ಅವು ಲ್ಯಾಪ್ಸ್ ಆಗುತ್ತವೆ. ಆ ಪ್ರಶ್ನೆಗಳು ಮತ್ತು ಅದಕ್ಕೆ ಸಂಬಂಧಪಟ್ಟ ಉತ್ತರಗಳನ್ನು ಸಭಾ ನಡೆವಳಿಕೆಗಳಲ್ಲಿ ಮುದ್ರಣ ಮಾಡಬೇಕೆಂದಿದೆ. ಇದನ್ನು S.R.ಆಕ್ಟ್ ಪ್ರಕಾರ ನನಗೆ ದತ್ತವಾಗಿರುವ ಅಧಿಕಾರದ ಮೇಲೆ ಆ ನಿಯಮವನ್ನು suspend ಮಾಡಿದ್ದೇನೆ. ಎಂದಮಾತ್ರಕ್ಕೇ ಯಾವಾಗ್ಯೂ suspend ಮಾಡಬೇಕೆಂದು ಅರ್ಥವಲ್ಲ. ಮಿಕ್ಕ ಎಲ್ಲಕಡೆಯೂ ನೋಡಿಕೊಂಡು ಮದರಾಸ್, ಬೊಂಬಾಯಿ, ಯು.ಪಿ. ಮುಂತಾದ ಪ್ರಾಂತ್ಯಗಳಲ್ಲಿ ಯಾವರೀತಿ ಮಾಡಿದೆಯೆಂಬುದನ್ನು ನೋಡಿಕೊಂಡು ಇಲ್ಲಿಯೂ ಸೂಕ್ತ ಏರ್ಪಾಡು ಮಾಡಬೇಕೆಂದಿದೆ. ಈ ಸಂದರ್ಭದಲ್ಲಿ ನಾನು ಕಳುಹಿಸಿರುವ ಸರ್ಕ್ಯುಲರ್ ಈ ರೀತಿಯಿದೆ :

> "Rule 25 shall be deleted."
>
> "For rules 29 and 30 the following rule shall be substituted :—
>
> '29 (1) The reply to any question shall not be unduly delayed.
>
> (2) After replies to questions have been received, the Secretary shall prepare lists of questions and

(ಅಧ್ಯಕ್ಷರು.)

answers thereto. Copies of such lists shall be placed on the table of each member two hours before the commencement of the meeting on the day on which any entry about questions has been made in the list of business for the day.

(3) A list of questions which are to be answered on any day shall be sent to every member along with the list of business for the day."

" At the end of sub-rule (3) of rule 49, the following prioviso shall be added :

" Provided that in respect of the Legislative Assembly commencing from the 18th March 1957, the period of notice shall be ten clear days'."

So, I have suspended certain rules.

The Hon'ble Member might know that the Rule Making Committee sat for some days, held detailed discussions and have formulated certain rules. Those rules will be placed on the Table of the House on Monday. Hon'ble Members may go through them and if they find that they can be adopted, we will adopt them. If they want any change to be made, that can also be done. It is only for the interim period that I have suspended these rules.

Another point is : Sri Narasimha Reddy thinks that it is not possible to finish all the questions within the question hour. That is not my experience. We had been able to finish all the questions in the Bombay Legislative Assembly within the question hour. I may assure the Hon'ble Member that we will be able to finish here also. No doubt, supplementaries are many now, but as days pass by I am sure they will become less and less and they will not be as many as they are today. It is a new Assembly and members are a little bit enthusiastic about putting questions. As days pass by, they will adjust themselves and questions will be answered in as short a time as possible. The supplementaries will not be as many as they are now.

The point about the calling of members concerned, there may be some trouble about it. I agree. I will try to adjust myself so far as that point is concerned. Sometimes, what happens is, I am not able to call some of the members who evidently may think that they ought to have been called. When so many members stand together it sometimes happens that they cannot catch my eyes. But I shall try to call them as far as possible and there need not be any anger on that account. It is not fair for the members to say that I have been overlooking their interest. After all, when so many members stand together, I may not be able to know who is standing for a number of times. I am sorry my eyes are defective. But on that account there need not be any display of feelings. I request the members to bear with me and I may assure that I have no malice against them.

As Sri A. V. Narasimha Reddy pointed out, the draft rules are ready and the report of the Rule Making Committee will be placed before the House. The Hon'ble Members may adopt the report with or without changes. It is for them. It is only for a short time that we have this system. The Rule Making Committee report will be discussed here on the 21st of this month and it may be passed on that day. If it is not possible, another day will be fixed and after that there will be no difficulty.

[Sri B. R. SUNTHANKAR (Belgaum City) (*In Marathi*).— Sir, I wish to bring one thing to your notice. We deliver speeches in this House, but we get the transcripts after a week. As a matter of fact, we should get transcripts of our speeches for our perusal within three or four days.

Mr. SPEAKER (*In Marathi*).—This delay is due to insufficient reporting staff in our office. However, arrangements will be made to deliver the transcripts to members as early as possible.]

ಶ್ರೀ ಎಚ್. ಕೆ. ಸಿದ್ದಯ್ಯ (ಬೇಲೂರು–ಅನುಸೂಚಿತ ಜಾತಿಗಳು).—ಸ್ವಾಮಿ, ನನ್ನ ಸೂಚನೆಯೇನೆಂದರೆ ನಮ್ಮ ಕನ್ನಡ ಪ್ರದೇಶವೆಲ್ಲವೂ ಸೇರಿ ಒಂದು ದೊಡ್ಡ ದಾದ ರಾಜ್ಯವಾಯಿತು. ಈ ಸಭೆಯಲ್ಲಿ ಕನ್ನಡದಲ್ಲೆ ಮಾತನಾಡಬೇಕೆಂದು ಹೇಳಿ ಆಗಾಗ್ಯೆ ತಾವು ಹೇಳುತ್ತಿದ್ದೀರಿ. ಆದರೂ ಸಹ ಕೆಲವರು ಕನ್ನಡವನ್ನು ಬಿಟ್ಟು ಇಂಗ್ಲೀಷ್ ಪದವನ್ನು ಉಪಯೋಗಿಸುತ್ತಿದ್ದಾರೆ.

ಭಾಷಣವನ್ನು ಮಾಡುವಾಗ ಇಂಗ್ಲೀಷ್ ಪದವನ್ನು ಉಪಯೋಗಿಸುವುದರಿಂದ ಕೆಲವರಿಗೆ ಅರ್ಥವಾಗುವುದಿಲ್ಲ. ಏಕೆಂದರೆ ಆಗಾಗ್ಗೆ ಪ್ರಶ್ನೆಗಳಿಗೆ ಇಂಗ್ಲಿಷಿನಲ್ಲಿ ಉತ್ತರ ಕೊಡುತ್ತಿದ್ದರೆ ಆಗ ನಾವು ಸುಮ್ಮನೆ ಕುಳಿತುಕೊಂಡು ಮುಖ ನೋಡಬೇಕು. ನಮಗೇನೂ ಅರ್ಥವಾಗುವುದಿಲ್ಲ. ಆದ್ದರಿಂದ ಪ್ರತಿಯೊಂದು ಸಂದರ್ಭದಲ್ಲೂ, ಬಡ್ಜೆಟ್ ಮೇಲಿನ ಭಾಷಣಗಳನ್ನು ಮಾಡುವಾಗಲೂ ಮತ್ತು ಪ್ರಶ್ನೆ ಮತ್ತು ಉತ್ತರಗಳು ನಡೆಯುವಾಗಲೂ ಕನ್ನಡದಲ್ಲಿಯೇ ನಡೆಯುವಂತೆ ಏರ್ಪಾಡು ಮಾಡಬೇಕು. ಬಡ್ಜೆಟ್ ಪತ್ರಿಕೆಗಳನ್ನೂ ಕೂಡ ಕನ್ನಡದಲ್ಲಿಯೇ ಪ್ರಿಂಟ್ ಮಾಡಿಸಬೇಕು. ಉದಾಹರಣೆಗೆ ಹೇಳುವುದಾದರೆ, ಬಡ್ಜೆಟ್ಟಿನಲ್ಲಿ ಯಾವುದೋ ಒಂದು ಕೆರೆಗೋ ಅಥವಾ ಸೇತುವೆಗೋ ಸ್ವಲ್ಪ ಹಣವನ್ನು ಸರ್ಕಾರದವರು ಒದಗಿಸಿರುತ್ತಾರೆ ಎನ್ನೋಣ. ಅದು ಇಂಗ್ಲೀಷಿನಲ್ಲಿದ್ದರೆ ನಮಗೆ ಗೊತ್ತಾಗುವುದಿಲ್ಲ. ವಿಶಾಲ ಮೈಸೂರಿನಲ್ಲಿ ಅನೇಕ ಕ್ಷೇತ್ರಗಳಿಂದ ಹೊಸದಾಗಿ ಬಂದಿರತಕ್ಕವರಲ್ಲಿ ಕೆಲವರಿಗೆ ವಿಶಾಲ ಮೈಸೂರಿನ ಕಷ್ಟ ಸುಖಗಳು ಏನೆಂಬುದನ್ನು ತಿಳಿಯುವಂತೆ ಮಾಡುವುದು ಹೇಗೆ?

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ. ನಿಮ್ಮ ಅಭಿಪ್ರಾಯ ನನಗೆ ಅರ್ಥವಾಯಿತು. ಮುಖ್ಯವಾಗಿ ಕನ್ನಡದಲ್ಲಿ ಭಾಷಣ ಆಗಬೇಕು, ಬಡ್ಜೆಟ್ ಪೇಪರುಗಳನ್ನು ಮತ್ತು ಇತರ ಈ ಸಭೆಯ ಕಾರ್ಯಕಲಾಪಗಳ ವಿಷಯಗಳನ್ನು ಕನ್ನಡದಲ್ಲಿಯೇ ಪ್ರಿಂಟ್ ಮಾಡಿಕೊಡಬೇಕು ಎಂದು ನೀವು ಹೇಳುವುದು. ವಿಶೇಷವಾಗಿ ಮಾತನಾಡುವುದನ್ನು ಕಡಮೆ ಮಾಡಿ ಕೆಲವು ಪಾಯಿಂಟ್ಸ್ ಹೇಳಿದರೆ ಚೆನ್ನಾಗಿರುತ್ತದೆ. ಉದ್ದಕ್ಕೂ ಭಾಷಣ ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ.

ಶ್ರೀ ಎಚ್. ಕೆ. ಸಿದ್ದಯ್ಯ.—ಈಗ ನಾವು ಈ ಎರಡು ಪಾಯಿಂಟ್‌ಗಳನ್ನೂ ತಮ್ಮ ಮುಂದೆ ಇಟ್ಟಿದ್ದೇವೆ. ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ಕನ್ನಡದಲ್ಲಿ ಮಾತನಾಡುವುದು ಕನ್ನಡದಲ್ಲಿ ಪ್ರಿಂಟ್ ಮಾಡಿಸುವ ಹಾಗೆ ಮಾಡಬೇಕು.

ಅಧ್ಯಕ್ಷರು.—ನಾನು ಅದಕ್ಕೆ ಪ್ರಯತ್ನವಾಡುತ್ತೇನೆ.

ಮಾನ್ಯ ಸದಸ್ಯರೊಬ್ಬರು.—ಇಂಗ್ಲೀಷಿನಲ್ಲಿ ಭಾಷಣ ಮಾಡುವುದನ್ನು ತಪ್ಪಿಸಬೇಕ . ಈ ಸಭೆಯ ಪ್ರತಿಯೊಂದು ಕಾರ್ಯಕಲಾಪಗಳೂ ಕನ್ನಡದಲ್ಲಿಯೇ ನಡೆಯುವಂತೆ ವ್ಯವಸ್ಥೆ ಮಾಡುವುದು ಅವಶ್ಯಕವೆಂದು ನಾನು ಸಲಹೆ ಮಾಡುತ್ತೇನೆ.

ಅಧ್ಯಕ್ಷರು.—ಅದನ್ನು ಲಕ್ಷ್ಯದಲ್ಲಿ ಇಡುತ್ತೇನೆ.

MYSORE AGRICULTURAL INCOME-TAX BILL, 1957.

Introduction.

Sri T. MARIAPPA (Minister for Finance).—Sir, I beg to introduce :

The Mysore Agricultural Income Tax Bill 1957, which has been published in the Gazette under Rule 48 of the Rules of Procedure and Conduct of Business in the Mysore Legislative Assembly.

Mr. SPEAKER.—The Mysore Agricultural Income-Tax Bill 1957, is indroduced.

Members' Representations.

Sri C. M. POONACHA (Minister for Home Affairs and Industries).—May I bring just one matter to the notice of the Chair? In the course of replies to the supplementaries, one Hon'ble Member remarked against a member of the Public Service Commission and that particular remark, coming as it was from the Hon'ble Member Sri C. J. Muckannappa, will have to be expunged. In raising this point the very remarks that I am making also need not find a place. He used the words "white elephant". As you know, Sir, every State is required to have under the Constitution a Public Service Commission and the members are appointed for that Commission. Therefore, Sir, that particular remark, in my humble opinion, is uncalled for and uncharitable and should not find a place in the records.

Mr. SPEAKER.—I heard the words 'white elephant' I do not know who said them. Of course Sri C. J. Muckannappa says everybody is a 'white elephant' excepting himself. I should say that it is not fair that he should make such remarks.

Sri C. J. MUCKANNAPPA (Gubbi).—With great respect to the Chair I wish to state that I said 'white elephant' not to the persons who are at present working. After the members retire if they are granted pension it amounts to granting pension to 'white elephants'. Therefore I made the remark and it is not a sarcastic remark made against the sitting members of the Public Service Commission.

Mr. SPEAKER.—I will look into the records. Of course, you are giving an explanation now. I will go into the whole matter.

*Sri K. MALLAPPA (Mercara).—On a point of information. On page 14 para 1 of the Budget Speech it is stated that by the introduction of common taxation it is expected that the annual additional revenue would be about